

بِسْمِ اللهِ الرَّحْمَنِ الرَّحِيمِ

# ಒಳಿತುಗಳನ್ನು ಸ್ವಾಯತ್ತ ಮಾಡಿಕೊಳ್ಳಿರಿ; ಕೆಡುಕುಗಳಿಂದ ದೂರವಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **24-06-2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಪ್ರಾರ್ಥನೆಗಳು ಅಂಗೀಕರಿಸಲ್ಪಡಬೇಕಾದರೆ ಅಲ್ಲಾಹನ ಬಗ್ಗೆ ಪರಿಪೂರ್ಣ ವಿಶ್ವಾಸಹೊಂದಿ ಅವನು ಎಲ್ಲ ಶಕ್ತಿಸಾಮರ್ಥ್ಯಗಳನ್ನು ಹೊಂದಿದವನೆಂದು ಮನವರಿಕೆ ಮಾಡಿಕೊಂಡು ಅವನ ಆಜ್ಞೆಗಳನ್ನು ಅನುಷ್ಠಾನಕ್ಕೆ ತಂದು ಅವನೊಂದಿಗೆ ಬೇಡಿಕೊಳ್ಳುವುದು ಆವಶ್ಯಕವಾಗಿದೆ ಎಂದು ಕಳೆದ ವಾರದ ಖುತ್‌ಬದಲ್ಲಿ ಪ್ರಸ್ತಾಪಿಸಲಾಗಿತ್ತು. ಅಲ್ಲಾಹನ ಆಜ್ಞೆಗಳು ಯಾವುವು ಎನ್ನುವುದರ ಬಗ್ಗೆ ಅಲ್ಲಾಹನು ನಮಗೆ ಪವಿತ್ರ ಖುರ್‌ಆನ್ ಎಂಬ ಮಹೋನ್ನತ ಗ್ರಂಥವನ್ನು ದಯಪಾಲಿಸಿದ್ದಾನೆ. ಅದರಲ್ಲಿ ಅಲ್ಲಾಹನ ಎಲ್ಲ ಆಜ್ಞೆಗಳು, ನಾವು ಮಾಡಬೇಕಾದುದು ಮತ್ತು ಮಾಡಬಾರದವುಗಳು ವಿವರಿಸಲ್ಪಟ್ಟಿವೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ **ಫಲ್ ಯಸ್ತ ಜೀಬೂಲೀ** ನನ್ನ ದಾಸರು ಪವಿತ್ರ ಖುರ್‌ಆನ್‌ನಲ್ಲಿರುವ ನನ್ನ ಆಜ್ಞೆಗಳನ್ನು ಅನುಷ್ಠಾನಕ್ಕೆ ತರಬೇಕು ಎಂದು ಹೇಳಿದ್ದಾನೆ. ಇದರ ಫಲಸ್ವರೂಪವಾಗಿ ಅಲ್ಲಾಹನು ದಾಸರ ಪ್ರಾರ್ಥನೆಗಳನ್ನು ಅಂಗೀಕರಿಸುವನು ಮತ್ತು ಅವರಿಗೆ ನೇರಮಾರ್ಗವನ್ನು ತೋರಿಸಿಕೊಡುವನು.

ಪವಿತ್ರ ಖುರ್‌ಆನ್‌ನಲ್ಲಿ ಅಸಂಖ್ಯಾತ ಆಜ್ಞೆಗಳಿವೆ. ಅವುಗಳಲ್ಲಿ ನಾವು ಮಾಡಬೇಕಾದ ಮತ್ತು ಮಾಡಬಾರದ ಕೆಲಸಗಳ ಬಗ್ಗೆ ಆಜ್ಞಾಪಿಸಲಾಗಿವೆ. ಅವುಗಳನ್ನು ನಾವು ಆಗಾಗ ಮೆಲುಕು ಹಾಕುತ್ತಾ ಇರಬೇಕು. ಅವುಗಳನ್ನು ನೆನಪಿಸುತ್ತಾ ಇರಬೇಕು. ಈಗ ನಾನು ಕೆಲವು ಆಜ್ಞೆಗಳ ಬಗ್ಗೆ ಪ್ರಸ್ತಾಪಿಸುವೆನು. ಎಲ್ಲದಕ್ಕಿಂತಲೂ ಮುಖ್ಯವಾದ ಮತ್ತು ನಾವು ಯಾವಾಗಲೂ ನೆನಪಿನಲ್ಲಿಡಬೇಕಾದ ಆಜ್ಞೆ, ಅದು ಮನುಷ್ಯನನ್ನು ಸೃಷ್ಟಿಸಿದ ಉದ್ದೇಶವೂ ಆಗಿದೆ. ಅದು ಅಲ್ಲಾಹನನ್ನು ಆರಾಧಿಸಬೇಕು ಎಂಬ ಆಜ್ಞೆಯಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ: وَمَا خَلَقْتُ الْجِنَّ وَالإِنسَ إِلاَّ لِيَعْبُدُونِ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ವಚನಕ್ಕೆ ಹೀಗೆ ಅರ್ಥ ಬರೆದಿದ್ದಾರೆ: ನಾನು ಜಿನ್ನ್ ಮತ್ತು ಇನ್ಸ್‌ಗಳನ್ನು ಸೃಷ್ಟಿಸಿರುವುದು ಅವರು ನನ್ನನ್ನು ಆರಾಧಿಸಲಿಕ್ಕೋಸ್ಕರವಾಗಿದೆ.

ನಾನು ಈ ವಿಷಯದ ಬಗ್ಗೆ ಅನೇಕ ಸಾರಿ ವಿವರಿಸಿದ್ದೇನೆ. ನಾನು ಪದೇ ಪದೇ ಈ ವಿಷಯದ ಬಗ್ಗೆ ನಿಮ್ಮ ಗಮನ ಹರಿಸುತ್ತಾ ಇರುತ್ತೇನೆ. ಆದರೆ ನಮ್ಮಲ್ಲಿ ಬಹಳ ಜನರು ಕೆಲವು ದಿನ ಅವುಗಳನ್ನು ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ಅನಂತರ ಮರೆತು ಬಿಡುತ್ತಾರೆ. ನನಗೆ ತಿಳಿದಿದೆ ಮತ್ತು ನಾನು ನೋಡಿದ್ದೇನೆ, ಕೆಲವು ವಾಕಿಫೀನೆ ಝಿಂದಗೀ (ಜಮಾಅತಿಗೋಸ್ಕರ ಜೀವಿತವನ್ನು ಅರ್ಪಿಸಿದವರು) ಮತ್ತು ಧಾರ್ಮಿಕ ಜ್ಞಾನಗಳಿಸಿ ಅದರ ಮಹತ್ವವನ್ನು ಅರಿತವರು ಸಹ ಅದರ ಕಡೆಗೆ ಶ್ರದ್ಧೆ ನೀಡಬೇಕಾದ ರೀತಿಯಲ್ಲಿ ಶ್ರದ್ಧೆ ನೀಡುವುದಿಲ್ಲ. ಅದೇರೀತಿ ಜಮಾಅತಿನ ಹುದ್ದೇದಾರರು ಸಹ ಮೀಟಿಂಗ್‌ಗಳಲ್ಲಿ ತಮ್ಮ ಧಾರ್ಮಿಕ ಜ್ಞಾನ ಪ್ರಕಟಿಸಲು ಪ್ರಯತ್ನ ಮಾಡುತ್ತಾರೆ. ಯಾವುದಾದರೂ ಸಮಸ್ಯೆ ತಲೆದೋರಿದರೆ ಪವಿತ್ರ ಖುರ್‌ಆನ್ ಮತ್ತು ಹದೀಸುಗಳನ್ನು ಉಲ್ಲೇಖಿಸಿ ಮನವರಿಕೆ ಮಾಡಿಕೊಡುತ್ತಾರೆ. ಆದರೆ ಇಂತಹ ಜನರಲ್ಲಿ ಸಹ ಕೆಲವರು ಈ ವಿಷಯದ ಬಗ್ಗೆ ಲಕ್ಷ್ಯ ನೀಡಬೇಕಾದ ರೀತಿಯಲ್ಲಿ ಲಕ್ಷ್ಯ ನೀಡುವುದಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದೆಡೆ ಹೀಗೆ ಹೇಳುತ್ತಾರೆ: ನೀವು ಈ ವಿಷಯ ತಿಳಿದುಕೊಳ್ಳಿರಿ. ಅಲ್ಲಾಹನು ನಿಮ್ಮನ್ನು ಸೃಷ್ಟಿಸಿದುದರ ಉದ್ದೇಶ ನೀವು ಅವನನ್ನು ಆರಾಧಿಸಬೇಕು ಮತ್ತು ನೀವು ಅವನಿಗೆ ಸೇರಿದವರಾಗಬೇಕು ಎಂದಾಗಿದೆ. ಲೌಕಿಕ ವ್ಯವಹಾರಗಳು ನಿಮ್ಮ ಉದ್ದೇಶ ಲಕ್ಷ್ಯವಾಗಬಾರದು. ನಾನು ಪದೇ ಪದೇ ಇದನ್ನು ಒತ್ತಿ ಹೇಳುವುದೇಕೆಂದರೆ, ಮನುಷ್ಯನು ಆಗಮಿಸಿರುವುದು ಇದಕ್ಕಾಗಿದೆ ಎಂದು ನನ್ನ ಅಭಿಪ್ರಾಯವಾಗಿದೆ. ಇದರಿಂದಲೇ ಮನುಷ್ಯನು ದೂರ ಸರಿದಿರುವನು.

ಈ ವಿಷಯವನ್ನು ಸ್ಪಷ್ಟೀಕರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಲೌಕಿಕ ವ್ಯವಹಾರಗಳು ನಿಮ್ಮ ಉದ್ದೇಶ ಲಕ್ಷ್ಯವಾಗಬಾರದು ಎಂದು ನಾನು ಹೇಳಿದುದರ ಅರ್ಥ ನೀವು ಲೌಕಿಕ ಕೆಲಸಗಳನ್ನು ಮಾಡಬಾರದು ಎಂದಲ್ಲ. ನಿಸ್ಸಂಶಯವಾಗಿ ಅವುಗಳನ್ನು ಮಾಡಿರಿ. ಆದರೆ ಆರಾಧನೆ ಮಾಡುವ ನಿಮ್ಮ ಹೊಣೆಗಾರಿಕೆಗೆ, ನಿಮ್ಮನ್ನು ಸೃಷ್ಟಿಸಿರುವ ಉದ್ದೇಶದ ಬಗ್ಗೆ ನೀವು ಪ್ರಥಮ ಆದ್ಯತೆ ನೀಡಬೇಕು.

ಈಗ ರಮಝಾನ್‌ನಲ್ಲಿ ಈ ಆಜ್ಞೆಯನ್ನು ಸಾಮಾನ್ಯವಾಗಿ ಎಲ್ಲರೂ ಪಾಲಿಸುತ್ತಿದ್ದಾರೆ. ಆದರೆ ಅಲ್ಲಾಹನು ನಿರ್ದೇಶಿಸಿದ ರೀತಿಯಲ್ಲಿ ಆರಾಧನೆ ಮಾಡುವುದಕ್ಕೆ ಕೇವಲ ರಮಝಾನ್ ತಿಂಗಳಲ್ಲಿ ಮಾತ್ರ ಶ್ರದ್ಧೆ ವಹಿಸಿದರೆ ಸಾಕಾಗಲಾರದು. ರಮಝಾನಿನಲ್ಲಿ ದೊರೆತ ತರಬೇತಿ ಮತ್ತು ಮಾಡಿದ ಪರಿಶ್ರಮ, ಆರಾಧನೆ ಬಗ್ಗೆ ನಮ್ಮಲ್ಲಿ ಉಂಟಾದ ಶ್ರದ್ಧೆ, ಇವುಗಳನ್ನು ನಾವು ನಮ್ಮ ಜೀವಿತದ ಸ್ಥಿರವಾದ ಭಾಗವನ್ನಾಗಿ ಮಾಡಲು ಪ್ರಯತ್ನಿಸಬೇಕು. ನಾವು ನಮ್ಮನ್ನು ಮಾದರಿಯನ್ನಾಗಿ ಮಾಡಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಹೇಳುತ್ತಾರೆ: ಮನುಷ್ಯನನ್ನು ಅಲ್ಲಾಹನು ಸೃಷ್ಟಿಸಿದ ಉದ್ದೇಶವು ಅಲ್ಲಾಹನ ಆರಾಧನೆ ಮಾತ್ರವಾಗಿರುವಾಗ ಅನ್ಯ ವಸ್ತುಗಳನ್ನು ತನ್ನ ಉದ್ದೇಶಲಕ್ಷ್ಯವನ್ನಾಗಿ ಮಾಡಿಕೊಳ್ಳುವುದು ಸತ್ಯ ವಿಶ್ವಾಸಿಗೆ ಶೋಭೆ ತರುವಂಥದ್ದಲ್ಲ. ಶಾರೀರಿಕ ಆವಶ್ಯಕತೆಗಳು ಧರ್ಮಬದ್ಧವಾಗಿವೆ. ಆದರೆ ಅವು ಮಿತಿಮೀರಬಾರದು. ಶಾರೀರಿಕ ಹಕ್ಕುಗಳು ಧರ್ಮ ಬದ್ಧವಾಗಿರುವುದು ಏಕೆಂದರೆ ಅದು ನಿಷ್ಕ್ರಿಯವಾಗದಿರಲಿಕ್ಕಾಗಿದೆ. ಆದುದರಿಂದ ನೀವು ಲೌಕಿಕ ಸಾಮಾಗ್ರಿಗಳನ್ನು ಅದಕ್ಕೋಸ್ಕರ ಬಳಸಿರಿ. ನಿಮ್ಮನ್ನು ಆರಾಧನೆಗೆ ಸಾಮರ್ಥ್ಯವುಳ್ಳವರನ್ನಾಗಿ ಮಾಡಲು ಅವುಗಳನ್ನು ಉಪಯೋಗಿಸಿರಿ. ಆದರೆ ಅವುಗಳೇ ನಿಮ್ಮ ಮುಖ್ಯ ಉದ್ದೇಶಲಕ್ಷ್ಯಗಳಾಗಬಾರದು.

ಶಾರೀರಿಕ ಹಕ್ಕುಗಳ ಈಡೇರಿಕೆ ಬಗ್ಗೆ ಹದೀಸುಗಳಲ್ಲಿ ಸಹ ಪ್ರಸ್ತಾಪಿಸಲಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಿಮ್ಮ ಶರೀರಕ್ಕೆ ಸಂಬಂಧಿಸಿ ನೀವು ಈಡೇರಿಸಬೇಕಾದ ಹಕ್ಕುಗಳಿವೆ. ಹಝ್ರತ್ ಮಸೀಹ್ ಮೌಊದ್

ಅಲೈಹಿಸ್ಸಲಾಮ್ ಹೇಳುತ್ತಾರೆ: ನಿಸ್ಸಂಶಯವಾಗಿ ಶಾರೀರಿಕ ಹಕ್ಕುಗಳಿವೆ. ಆದರೆ ಅವುಗಳು ಮಿತಿಮೀರಬಾರದು. ಮಧ್ಯಮಾರ್ಗವನ್ನು ಅವಲಂಬಿಸಬೇಕು. ಧರ್ಮಬದ್ಧವಾದ ಶಾರೀರಿಕ ಹಕ್ಕುಗಳನ್ನು ಈಡೇರಿಸಿಕೊಡಿರಿ. ಏಕೆಂದರೆ ಅಲ್ಲಾಹನು ಈ ಹಕ್ಕುಗಳನ್ನು ಮನುಷ್ಯನ ಪ್ರಕೃತಿಯಲ್ಲಿ ಇರಿಸಿದ್ದಾನೆ. ಆದುದರಿಂದ ಅವುಗಳನ್ನು ಈಡೇರಿಸುವುದು ಆವಶ್ಯಕವಾಗಿದೆ. ಲೌಕಿಕ ಸಾಮಗ್ರಿಗಳನ್ನು ನಿಮ್ಮ ಪ್ರಯೋಜನಕ್ಕೆ ಉಪಯೋಗಿಸಿರಿ. ಕೆಲವು ಕೆಟ್ಟ ವಸ್ತುಗಳು ಹೇಗಿರುತ್ತವೆ ಎಂದರೆ ಅವುಗಳನ್ನು ಬಳಸದಿದ್ದರೆ ಶಾರೀರಿಕ ಹಕ್ಕುಗಳು ಈಡೇರಿಸಲು ಸಾಧ್ಯವಾಗುವುದಿಲ್ಲ ಮತ್ತು ಕೆಲವು ಇಂದ್ರಿಯ ಶಕ್ತಿಗಳು ಕೊನೆಗೊಳ್ಳುತ್ತವೆ. ಆರಾಧನೆಯ ಉದ್ದೇಶವನ್ನು ಈಡೇರಿಸಲು ಈ ವಸ್ತುಗಳನ್ನು ಉಪಯೋಗಿಸುವುದು ಸಹ ಆವಶ್ಯಕವಾಗಿವೆ. ಅಲ್ಲಾಹನು ಸೃಷ್ಟಿಸಿದ ವೈಶಿಷ್ಟ್ಯಗಳನ್ನು ಮತ್ತು ಶಕ್ತಿಗಳನ್ನು ಉಪಯೋಗಿಸುವುದು ಆವಶ್ಯಕವಾಗಿದೆ. ಅವುಗಳನ್ನು ಉಪಯೋಗಿಸದೆ ಇರುವುದು ಅಲ್ಲಾಹನಿಗೆ ಕೃತಘ್ನತೆ ತೋರಿಸುವುದಾಗಿದೆ. ಒಬ್ಬ ಸಹಾಬಿ ಮಹಿಳೆ ಬಹಳ ಕೆಟ್ಟ ಸ್ಥಿತಿಯಲ್ಲಿದ್ದರು. ಆಕೆ ಉಡುಗೆ ತೊಡುಗೆ ಬಗ್ಗೆ ಶ್ರದ್ಧೆ ವಹಿಸುತ್ತಿರಲಿಲ್ಲ. ತಲೆ ಬಾಚುತ್ತಲೂ ಇರಲಿಲ್ಲ. ಆ ಮಹಿಳೆ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಲಾಯಿತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಕೆಯನ್ನು ಕರೆದು ವಿಚಾರಿಸಿದಾಗ ಆಕೆ ಹೇಳಿದರು: ನಾನು ಯಾರಿಗೋಸ್ಕರ ನನ್ನನ್ನು ಅಲಂಕರಿಸಲಿ. ನನ್ನ ಪತಿ ಹಗಲು ಹೊತ್ತು ಆರಾಧನೆಯಲ್ಲಿ ಮಗ್ನರಾಗಿರುತ್ತಾರೆ. ರಾತ್ರಿ ಸಹ ಆರಾಧನೆ ಮಾಡುತ್ತಾ ಇರುತ್ತಾರೆ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಕೆಯ ಪತಿಯನ್ನು ಕರೆಯಿಸಿ ಹೇಳಿದರು: ನಿಮಗೆ ನಿಮ್ಮ ಶಾರೀರದ ಮೇಲೆ ಕೆಲವು ಹೊಣೆಗಾರಿಕೆಗಳಿವೆ. ಅದೇ ರೀತಿ ನಿಮ್ಮ ಪತ್ನಿಗೆ ನೀವು ಈಡೇರಿಸಿಕೊಡಬೇಕಾದ ಹಕ್ಕುಗಳಿವೆ. ಎಲ್ಲ ಹಕ್ಕುಗಳನ್ನು ಈಡೇರಿಸಿಕೊಡುವುದು ಆವಶ್ಯಕವಾಗಿದೆ ಎಂದು ಹೇಳಿದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅನುಚಿತವಾಗಿ ಉಪಯೋಗಿಸುವುದಾದರೆ ಹಲಾಲ್ ವಸ್ತುಗಳು ಸಹ ಹರಾಮ್ ಆಗಿ ಬಿಡುತ್ತವೆ. وَمَا خَلَقْتُ الْجِنَّ وَالإِنسَ إِلاَّ لِيَعْبُدُونِ ಎಂಬ ಪವಿತ್ರ ಖುರ್‌ಆನ್ ವಚನದಿಂದ ಪ್ರಕಟವಾಗುವುದು ಏನೆಂದರೆ ಮನುಷ್ಯನನ್ನು ಆರಾಧನೆಗೋಸ್ಕರ ಮಾತ್ರ ಸೃಷ್ಟಿಸಲಾಗಿದೆ ಎಂದು. ಆದುದರಿಂದ ಈ ಉದ್ದೇಶಲಕ್ಷ್ಯವನ್ನು ಈಡೇರಿಸಲು ಎಷ್ಟು ಪದಾರ್ಥ ಬೇಕಾಗಿದೆಯೋ ಅದಕ್ಕಿಂತ ಹೆಚ್ಚು ಬಳಸುವುದು ಅದರ ಬಳಕೆ ಧರ್ಮಬದ್ಧವಾಗಿದ್ದರೂ ಅದು ಅನಾವಶ್ಯಕವಾದ ಕಾರಣ ಅವನಿಗೆ ಅದು ಹರಾಮ್ ಆಗುತ್ತದೆ. ಎಲ್ಲ ವಸ್ತುಗಳ ಧರ್ಮಬದ್ಧ ಬಳಕೆ ಅನುಮತಿಸಲಾಗಿದೆ. ಆದರೆ ಆವಶ್ಯಕತೆಗಿಂತ ಹೆಚ್ಚು ಬಳಸುವುದು ಹಲಾಲ್ ವಸ್ತುಗಳನ್ನು ಸಹ ಹರಾಮ್ ಆಗಿ ಮಾಡುತ್ತವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಹಗಲು ರಾತ್ರಿ ಶಾರೀರಿಕ ಸುಖಭೋಗಗಳಲ್ಲಿಯೇ ನಿರತನಾಗಿರುವ ಓರ್ವನಿಗೆ ಆರಾಧನೆಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸಲು ಹೇಗೆ ತಾನೆ ಸಾಧ್ಯ? ಸತ್ಯ ವಿಶ್ವಾಸಿಯಾದವನು ಕಹಿಯಾದೊಂದು ಜೀವಿತ ಅನುಭವಿಸಬೇಕು. ಆದರೆ ಸುಖಭೋಗಗಳಲ್ಲಿ ಮಾತ್ರ ಜೀವಿಸುವುದರಿಂದ ಈ ಜೀವಿತದ ನೂರರಲ್ಲೊಂದು ಭಾಗದ ಲಾಭವನ್ನು ಕೂಡ ಪಡೆಯಲು ಸಾಧ್ಯವಾಗದು.

ಅಲ್ಲಾಹನು ನಮಾಝ್ ಮತ್ತು ಆರಾಧನೆ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಅನೇಕ ಸ್ಥಳಗಳಲ್ಲಿ ಪ್ರಸ್ತಾಪಿಸಿದ್ದಾನೆ. ಸೂರತುನ್ನೂರ್‌ನಲ್ಲಿ ಅಲ್ಲಾಹ್ ಹೇಳುತ್ತಾನೆ:

رِجَالٌ لاَ تُلْهِيهِمْ تِجَارَةٌ وَلاَ بَيْعٌ عَنْ ذِكْرِ اللهِ وَإِقَامِ الصَّلاَةِ
وَإِيتَاءِ الزَّكَاةِ يَخَافُونَ يَوْمًا تَتَقَلَّبُ فِيهِ الْقُلُوبُ وَالأَبْصَارُ

ಆ ಜನರ (ಅಲ್ಲಾಹನ ಸ್ತುತಿ ಕೀರ್ತನೆ ಮಾಡುವವರ) ವ್ಯಾಪಾರ–ವ್ಯವಹಾರಗಳು ಅಲ್ಲಾಹನ ಸ್ಮರಣೆಯಿಂದಲೂ ನಮಾಝಿನ ನಿರ್ವಹಣೆಯಿಂದಲೂ ಝಕಾತಿನ ನೀಡುವಿಕೆಯಿಂದಲೂ ಅವರನ್ನು ನಿರ್ಲಕ್ಷ್ಯತೆ ಹೊಂದಿದವರನ್ನಾಗಿ ಮಾಡುವುದಿಲ್ಲ. ಹೃದಯಗಳು ತಳಮಳಗೊಳ್ಳುವ ಮತ್ತು ಕಣ್ಣುಗಳು ಅಡಿಮೇಲಾಗುವ ಒಂದು ದಿನದ ಬಗ್ಗೆ ಅವರು ಭಯಪಡುತ್ತಾರೆ. (ಪವಿತ್ರ ಖುರ್‌ಆನ್ 24:38)

ಈ ಗೌರವ ಎಲ್ಲರಿಗಿಂತ ಮಿಗಿಲಾಗಿ ದೊರೆತದ್ದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರಿಗೆ ಆಗಿತ್ತು. ಅವರು ಅಲ್ಲಾಹನಿಗೆ ಪ್ರಿಯರಾದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಮ್ಮ ಸಹಾಬರ ಬಗ್ಗೆ ಹೀಗೆ ಹೇಳಿದರು: ಅವರು ನಿಮಗೆ ಮಾರ್ಗದರ್ಶಿಗಳಾಗಿದ್ದಾರೆ. ಅವರನ್ನು ಹಿಂಬಾಲಿಸಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ವಚನದ ವ್ಯಾಖ್ಯಾನ ಮಾಡುತ್ತಾ ಹೀಗೆ ಬರೆದಿದ್ದಾರೆ: ತಝ್‌ಕಿರತುಲ್ ಅವ್‌ಲಿಯಾ ಎಂಬ ಪುಸ್ತಕದಲ್ಲಿ ಒಬ್ಬ ವ್ಯಾಪಾರಿಯ ಬಗ್ಗೆ ಪ್ರಸ್ತಾಪಿಸಲಾಗಿದೆ. ಆ ವ್ಯಾಪಾರಿ ಸಾವಿರಗಟ್ಟಲೆ ರೂಪಾಯಿಗಳ ಸರಕುಗಳ ಖರೀದಿ ಮತ್ತು ಮಾರಾಟದಲ್ಲಿ ಮಗ್ನನಾಗಿದ್ದನು. ಒಬ್ಬ ವಲಿ (ಸಂತ) ಆ ವ್ಯಾಪಾರಿಯನ್ನು ನೋಡಿದಾಗ ದಿವ್ಯದರ್ಶನ ಮೂಲಕ ಅವರಿಗೆ ತಿಳಿಯಿತು – ಆ ವ್ಯಾಪಾರಿ ವ್ಯಾಪಾರ ವಹಿವಾಟು ಮಾಡುತ್ತಿದ್ದಾಗ ಸಹ ಅಲ್ಲಾಹನ ಬಗ್ಗೆ ನಿರ್ಲಕ್ಷ್ಯತೆಯಿಂದಿರಲಿಲ್ಲ ಎಂದು. ಅಲ್ಲಾಹನು **ಲಾ ತುಲ್‌ಹೀಹಿಮ್ ತಿಜಾರತುನ್ ವಲಾ ಬೈಉನ್ ಅನ್ ಝಿಕ್ರಿಲ್ಲಾಹ್** ಎಂದು ಹೇಳಿರುವುದು ಇಂತಹ ಮನುಷ್ಯರ ಕುರಿತಾಗಿದೆ. ಖರೀದಿ ಮತ್ತು ಮಾರಾಟ ಅವರನ್ನು ಅಲ್ಲಾಹನ ಸ್ಮರಣೆಯಿಂದ ನಿರ್ಲಕ್ಷ್ಯತೆ ಹೊಂದಿದವರನ್ನಾಗಿ ಮಾಡುವುದಿಲ್ಲ. ಮನುಷ್ಯನ ಶ್ರೇಷ್ಠತೆ ಇರುವುದು ಇದರಲ್ಲಿಯೇ ಆಗಿದೆ. ಅವನು ಲೌಕಿಕ ಕೆಲಸಗಳನ್ನು ಮಾಡುತ್ತಾ ಇರಬೇಕು ಮತ್ತು ಅಲ್ಲಾಹನನ್ನು ಮರೆತು ಬಿಡಬಾರದು. ಭಾರ ಹೊರಿಸುವಾಗ ಮಲಗಿ ಬಿಡುವ ಮತ್ತು ಭಾರ ಇಲ್ಲದೆ ಇರುವಾಗ ಚೆನ್ನಾಗಿ ಚಲಿಸುವ ಕುದುರೆಯಿಂದ ಪ್ರಯೋಜನವಾದರೂ ಏನು?

ಲೌಕಿಕ ಕೆಲಸಗಳ ಬಗ್ಗೆ ಗಾಬರಿಗೊಂಡು ಏಕಾಂತವಾಸಕ್ಕೆ ಹೊರಡುವ ಫಕೀರನು ತನ್ನ ಬಲಹೀನತೆ ತೋರಿಸುತ್ತಾನೆ. ಇಸ್ಲಾಮಿನಲ್ಲಿ ಸನ್ಯಾಸವಿಲ್ಲ. ಪತ್ನಿಯನ್ನೂ ಮಕ್ಕಳನ್ನೂ ಬಿಟ್ಟು ಬಿಡಬೇಕೆಂದು ಮತ್ತು ಲೌಕಿಕ ಕೆಲಸಗಳನ್ನು ಬಿಡಬೇಕೆಂದು ನಾವು ಹೇಳುವುದಿಲ್ಲ. ನೌಕರಿ ಮಾಡುವವನು ತನ್ನ ಕಡ್ಡಾಯ ಕರ್ತವ್ಯಗಳನ್ನು ಈಡೇರಿಸಬೇಕು. ವ್ಯಾಪಾರಿ ತನ್ನ ವ್ಯಾಪಾರವನ್ನು ನಡೆಸಬೇಕು. ಆದರೆ ಧರ್ಮಕಾರ್ಯಗಳಿಗೆ ಆದ್ಯತೆ ನೀಡಬೇಕೆಂಬ ಶರತ್ತನ್ನೂ ಪಾಲಿಸಬೇಕು.

ನಮಾಝನ್ನು ಸಂರಕ್ಷಿಸುವ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ: حَافِظُوا عَلَى الصَّلَوَاتِ وَالصَّلاَةِ الْوُسْطَى وَقُومُوا لِلَّهِ قَانِتِينَ ನೀವು (ಎಲ್ಲ)

ನಮಾಝುಗಳನ್ನೂ (ವಿಶೇಷವಾಗಿ) ಮಧ್ಯ ನಮಾಝುನ್ನೂ ಜಾಗರೂಕತೆಯಿಂದ ನಿರ್ವಹಿಸಿರಿ. ನೀವು ಅಲ್ಲಾಹನ ಮುಂದೆ ವಿಧೇಯರಾಗಿ ನಿಲ್ಲಿರಿ. (ಪವಿತ್ರ ಖುರ್‌ಆನ್ 2:239)

ಈ ವಚನದಲ್ಲಿ ಜನರನ್ನು ಎಂತಹ ನಮಾಝ್ ಬಗ್ಗೆ ಎಚ್ಚರಿಸಲಾಗಿದೆ ಎಂದರೆ, ಅವರಿಗೆ ಯಾವುದಾದರೂ ನಮಾಝ್ ಯಾವುದಾದರೂ ರೀತಿಯಲ್ಲಿ ಕಷ್ಟಕರವಾಗಿರುತ್ತದೆ. ಯಾರಿಗಾದರೂ ರಾತ್ರಿ ದೀರ್ಘಕಾಲ ಎಚ್ಚರಗೊಂಡಿರುವುದರಿಂದ ಮತ್ತು ಉದಾಸೀನತೆ ಕಾರಣದಿಂದ ಸುಬ್‌ಹ್ ನಮಾಝ್‌ಗೆ ಎದ್ದೇಳಲು ಕಷ್ಟವಾಗುವುದಿದ್ದರೆ, ಅಂತಹ ವ್ಯಕ್ತಿಗೆ ಈ ನಮಾಝ್ **ಸಲಾತುಲ್ ಉಸ್ತಾ** ಆಗುತ್ತದೆ. ಓರ್ವ ವ್ಯಾಪಾರಸ್ಥನಿಗೆ ಝುಹರ್ ಮತ್ತು ಅಸರ್ ನಮಾಝ್ ಅನುಷ್ಠಿಸುವುದು ಕಷ್ಟವಾಗುತ್ತವೆ. ಅಂತಹ ಸಂದರ್ಭಗಳಲ್ಲಿ ಈ ನಮಾಝ್‌ಗಳು ಅಂತಹ ಜನರಿಗೆ **ಸಲಾತುಲ್ ಉಸ್ತಾ** ಆಗಿರುತ್ತದೆ.

ಪವಿತ್ರ ಖುರ್‌ಆನ್‌ನಲ್ಲಿ ಒಪ್ಪಂದಗಳನ್ನೂ ಪ್ರತಿಜ್ಞೆಗಳನ್ನೂ ಈಡೇರಿಸುವ ಬಗ್ಗೆ ಮತ್ತು ಅವುಗಳಿಗೆ ಬದ್ಧರಾಗುವ ಬಗ್ಗೆ ಅಲ್ಲಾಹನು ಪ್ರಸ್ತಾಪಿಸಿದ್ದಾನೆ. ಇವುಗಳಲ್ಲಿ ಅಲ್ಲಾಹನೊಂದಿಗೆ ಮಾಡಿದ ಪ್ರತಿಜ್ಞೆಗಳು ಮತ್ತು ಮನುಷ್ಯರೊಂದಿಗೆ ಮಾಡಿದ ಒಪ್ಪಂದಗಳು ಸೇರಿವೆ. ಅಲ್ಲಾಹನೊಂದಿಗೆ ಮಾಡಿದ ಪ್ರತಿಜ್ಞೆ ಅಂದರೆ ಅಲ್ಲಾಹನ ಧರ್ಮದ ಬಗ್ಗೆ ಮಾಡಿದ ಪ್ರತಿಜ್ಞೆಯಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡುವಾಗ ಮಾಡಿದ ಪ್ರತಿಜ್ಞೆಗಳು ಇದರಲ್ಲಿ ಸೇರಿವೆ. ಧರ್ಮಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವ ಬಗ್ಗೆ ನಾವು ಪ್ರತಿಜ್ಞೆ ಮಾಡಿರುತ್ತೇವೆ. ಇಸ್ಲಾಮ್ ಧರ್ಮ ತತ್ವಗಳನ್ನು ಅನುಸರಿಸುವುದಾಗಿ ನಾವು ಪ್ರತಿಜ್ಞೆ ಮಾಡಿರುತ್ತೇವೆ. ಇವುಗಳೆನ್ನೆಲ್ಲಾ ಪಾಲಿಸುತ್ತೇವೆ ಎಂದು ಪ್ರತಿಜ್ಞೆ ಮಾಡಿದ್ದೇವೆ. ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳನ್ನು ಸಲ್ಲಿಸುವ ಬಗ್ಗೆ ಅವು ನಮ್ಮ ಗಮನ ಸೆಳೆಯುತ್ತವೆ. ಬೈಅತ್ ಶರತ್ತುಗಳಲ್ಲಿ ಎಲ್ಲ ಸಂಗತಿಗಳೂ ಸೇರಿವೆ. ಜನರ ಹಕ್ಕುಗಳನ್ನು ಈಡೇರಿಸಿಕೊಡುವ ಬಗ್ಗೆ ಸಹ ನಮ್ಮ ಗಮನ ಸೆಳೆಯಲಾಗಿದೆ. ಅವುಗಳ ಕಡೆಗೆ ನಾವು ಶ್ರದ್ಧೆ ನೀಡಬೇಕಾಗಿದೆ.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ:

وَأَوْفُوا بِعَهْدِ اللَّهِ إِذَا عَاهَدْتُمْ وَلاَ تَنقُضُوا الأَيْمَانَ بَعْدَ تَوْكِيدِهَا
وَقَدْ جَعَلْتُمُ اللَّهَ عَلَيْكُمْ كَفِيلاً إِنَّ اللَّهَ يَعْلَمُ مَا تَفْعَلُونَ

ನೀವು ಅಲ್ಲಾಹನೊಂದಿಗೆ ಮಾಡಿದ ಪ್ರತಿಜ್ಞೆಯನ್ನು ಪಾಲಿಸಿರಿ. ಅಲ್ಲಾಹನನ್ನು ನೀವು ಜಾಮೀನುದಾರನನ್ನಾಗಿ ಮಾಡಿ ದೃಢ ಪ್ರತಿಜ್ಞೆಗೈದ ನಂತರ ಅದನ್ನು ಉಲ್ಲಂಘಿಸಬೇಡಿರಿ. ನಿಶ್ಚಯವಾಗಿಯೂ ನಿಮ್ಮ ಕೃತ್ಯಗಳ ಬಗ್ಗೆ ಅಲ್ಲಾಹನು ತಿಳಿಯುತ್ತಾನೆ. (ಪವಿತ್ರ ಖುರ್‌ಆನ್ 16: 92)

ಈ ವಚನದಲ್ಲಿ ಸ್ಪಷ್ಟ ಆಜ್ಞೆಗಳಿವೆ. ನೀವು ಎರಡು ಪ್ರತಿಜ್ಞೆಗಳನ್ನು ಮಾಡಿರುತ್ತೀರಿ. ಅದರಲ್ಲಿ ಒಂದು ಅಲ್ಲಾಹನೊಂದಿಗೆ ಮಾಡಿದ ಪ್ರತಿಜ್ಞೆಯಾಗಿದೆ. ಅದು ನಿಶ್ಚಯವಾಗಿಯೂ ಇಸ್ಲಾಮ್ ಧರ್ಮ ತತ್ವಗಳನ್ನು ಅನುಸರಿಸುವ ಬಗ್ಗೆ ಪ್ರತಿಜ್ಞೆಯಾಗಿದೆ ಮತ್ತು ಬೈಅತ್ ಪ್ರತಿಜ್ಞೆ ಸಹ ಸೇರಿದೆ. ಇಸ್ಲಾಮ್‌ಗೆ ಸೇರಿ ಮುಸ್ಲಿಮನಾಗಿ ಅಲ್ಲಾಹನ ಎಲ್ಲ ಆಜ್ಞೆಗಳನ್ನು ಪಾಲಿಸುವುದಾಗಿ ಮಾಡಿದ ಪ್ರತಿಜ್ಞೆ ಇದಾಗಿದೆ. ಎರಡನೆಯದು ಜನರು ಪರಸ್ಪರ ಮಾಡುವ ಪ್ರತಿಜ್ಞೆಗಳು ಮತ್ತು ಒಪ್ಪಂದಗಳಾಗಿವೆ. ಅವುಗಳನ್ನು ಸಹ ಈಡೇರಿಸಬೇಕು.

ಒಟ್ಟಿನಲ್ಲಿ ಒಬ್ಬ ಸತ್ಯವಿಶ್ವಾಸಿ ತನ್ನ ಎಲ್ಲ ಪ್ರತಿಜ್ಞೆಗಳನ್ನೂ ಒಪ್ಪಂದಗಳನ್ನೂ ಈಡೇರಿಸಬೇಕು ಎಂಬುದನ್ನು ಮನವರಿಕೆ ಮಾಡುವುದು ಆವಶ್ಯಕವಾಗಿದೆ. ನಾವು ಈ ವಿಷಯದ ಮಹತ್ವವನ್ನು ಮತ್ತು ವಾಸ್ತವಿಕತೆಯನ್ನು ಅರಿತುಕೊಂಡರೆ ಎಲ್ಲ ವಿಧ ಜಗಳ, ಮೋಸಗಾರಿಕೆ ಮತ್ತು ದೋಷಾರೋಪಗಳಿಂದ ನಮ್ಮ ಸಮಾಜ ಮುಕ್ತವಾಗಿ ಶುದ್ಧವಾಗುವುದು. ಕುಟುಂಬ ಜೀವನದಲ್ಲಿ ಸಂಭವಿಸುವ ಸಮಸ್ಯೆಗಳು ಸಹ ತಲೆದೋರಲಾರವು. ಏಕೆಂದರೆ ಅಲ್ಲಿ ಸಹ ಒಪ್ಪಂದಗಳನ್ನು ಮುರಿಯಲಾಗುತ್ತಿದೆ. ನಾನು ನೋಡುತ್ತಿದ್ದೇನೆ, ಇಂದಿನ ಕಾಲದಲ್ಲಿ ಲೌಕಿಕ ದುರಾಶೆಗಳ ಪರಿಣಾಮವಾಗಿ ನಮ್ಮೊಳಗೆ ಒಪ್ಪಂದಗಳನ್ನು ಮುರಿಯುವ ಮತ್ತು ಮೋಸ ಮಾಡುವ ಮತ್ತು ವಾಗ್ದಾನಗಳನ್ನು ಈಡೇರಿಸದಿರುವ ಸಂಭವಗಳು ಹೆಚ್ಚಾಗುತ್ತಾ ಇವೆ. ಇವುಗಳಿಂದ ಜಮಾಅತಿಗೆ ಅಪಕೀರ್ತಿ ಉಂಟಾಗುತ್ತದೆಯಲ್ಲದೆ ಕೆಲವು ಸಾರಿ ಅಂತಹ ಜನರ ವಿಶ್ವಾಸ ಸಹ ನಾಶವಾಗುತ್ತದೆ. ಒಪ್ಪಂದವನ್ನು ಮುರಿಯುವಾಗ ಸುಳ್ಳನ್ನು ಆಶ್ರಯಿಸಬೇಕಾಗುತ್ತದೆ. ಸುಳ್ಳು ಹೇಳುವುದನ್ನು ಅಲ್ಲಾಹನು ಬಹಳ ಕಠಿಣವಾಗಿ ಖಂಡಿಸಿ ಅದರಿಂದ ರಕ್ಷಿಸಿಕೊಳ್ಳಲು ಆಜ್ಞಾಪಿಸಿದ್ದಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸುಳ್ಳಿನಷ್ಟು ಕೆಟ್ಟದಾದುದು ಬೇರೊಂದಿಲ್ಲ ಎಂದು ಚೆನ್ನಾಗಿ ತಿಳಿದುಕೊಳ್ಳಿರಿ. ಸಾಮಾನ್ಯವಾಗಿ ಲೌಕಿಕ ಜನರು ಹೇಳುತ್ತಾರೆ: ಸತ್ಯ ಹೇಳಿದರೆ ಹಿಡಿಗೂಡಲ್ಪಡುವೆವು ಎಂದು. ಆದರೆ ನಾನು ಅದನ್ನು ಹೇಗೆ ತಾನೆ ಅಂಗೀಕರಿಸಲಿ? ನನ್ನ ವಿರುದ್ಧ ಏಳು ಮೊಕದ್ದಮೆಗಳು ದಾಖಲಾಗಿತ್ತು. ಆದರೆ ಅಲ್ಲಾಹನ ಅನುಗ್ರಹದಿಂದ ಯಾವುದೇ ಮೊಕದ್ದಮೆಯಲ್ಲಿ ಒಂದು ಸುಳ್ಳು ಶಬ್ದ ಸಹ ಹೇಳುವ ಆವಶ್ಯಕತೆ ನನಗೆ ಉಂಟಾಗಿರಲಿಲ್ಲ. ನನಗೆ ಯಾವುದಾದರೂ ಮೊಕದ್ದಮೆಯಲ್ಲಿ ಅಲ್ಲಾಹನು ಸೋಲನ್ನು ನೀಡಿದನೆಂದು ಯಾರಾದರೂ ಹೇಳ ಬಲ್ಲರೇ? ಅಲ್ಲಾಹನು ಸತ್ಯವನ್ನು ಬೆಂಬಲಿಸುವವನೂ ಅದರ ಸಹಾಯಕನೂ ಆಗಿದ್ದಾನೆ. ಸತ್ಯವಂತನನ್ನು ಅವನು ಶಿಕ್ಷಿಸುವುದು ಸಂಭಾವ್ಯವೇ? ವಾಸ್ತವಿಕವಾದುದೇನೆಂದರೆ ಸತ್ಯ ಹೇಳಿದ ಕಾರಣ ಯಾರಿಗಾದರೂ ಶಿಕ್ಷೆಯಾಗಿದ್ದರೆ ಅದು ಸತ್ಯ ಹೇಳಿದ ಕಾರಣದಿಂದಾಗಿರುವುದಿಲ್ಲ. ಆ ಶಿಕ್ಷೆ ಅಂತಹ ಜನರ ಬೇರೆ ಯಾವುದಾದರೂ ಸೂಕ್ಷ್ಮಾತಿಸೂಕ್ಷ್ಮ ಕೆಟ್ಟಕೆಲಸಗಳ ಕಾರಣದಿಂದಾಗಿರುತ್ತವೆ.

ಮುತ್ತಖಿ (ಭಯಭಕ್ತಿಯುಳ್ಳ) ಜನರ ಬಗ್ಗೆ ಅಲ್ಲಾಹನು ಸೂಚಿಸಿದ ಒಂದು ಚಿಹ್ನೆ ಹೀಗಿದೆ: **ವಲ್ ಕಾಝಿಮೀನಲ್ ಗೈಝ ವಲ್ ಆಫೀನ ಅನಿನ್ನಾಸ್** ಎಂದರೆ ಕೋಪವನ್ನು ತಗ್ಗಿಸುವವರು ಮತ್ತು ಜನರನ್ನು ಕ್ಷಮಿಸುವವರು. ಈ ವಚನದಲ್ಲಿ ಬಳಸಲಾದ ಅಫ್‌ವ್ ಎಂಬ ಪದದ ಅರ್ಥ ತನ್ನ ವಿರುದ್ಧ ಮಾಡಲಾದ ಅಪರಾಧವನ್ನು ಸಂಪೂರ್ಣವಾಗಿ ಮರೆತು ಬಿಟ್ಟು ಕ್ಷಮಿಸುವುದಾಗಿದೆ. ಯಥಾರ್ಥ ಸತ್ಯವಿಶ್ವಾಸಿಯಾದವನು ಕೋಪವನ್ನು ತಗ್ಗಿಸುತ್ತಾನಲ್ಲದೆ ತನ್ನ ವಿರುದ್ಧ ಮಾಡಿದ ಅಪರಾಧವನ್ನು ಮರೆತು ಬಿಟ್ಟು ಕ್ಷಮಿಸುತ್ತಾನೆ. ಈ ರೀತಿ ಕೋಪವನ್ನು ತಗ್ಗಿಸುವುದರಿಂದ ಲಭಿಸುವ ಪ್ರಯೋಜನದ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ನೆನಪಿಡಿರಿ ಬುದ್ಧಿ ಮತ್ತು ಕೋಪಗಳ ಮಧ್ಯೆ ಅಪಾಯಕರವಾದ ಹಗೆತನವಿದೆ. ಸಿಟ್ಟು ಮತ್ತು ಉದ್ವೇಗ ಉಂಟಾಗುವಾಗ ಬುದ್ಧಿ ನಷ್ಟವಾಗುತ್ತದೆ. ಆದರೆ ತಾಳ್ಮೆ ವಹಿಸಿಕೊಂಡು ಸಹನೆ ದೋರುವವನಿಗೆ ಒಂದು ಪ್ರಕಾಶ ಲಭಿಸುತ್ತದೆ. ಅದರ ಮೂಲಕ ಅವನ ಬುದ್ಧಿಯಲ್ಲಿ ಒಂದು ಹೊಸ ಚಿಂತಾಶಕ್ತಿ ಉಂಟಾಗುತ್ತದೆ. ಅದರ ಪ್ರಕಾಶದಿಂದ ಇನ್ನಷ್ಟು ಪ್ರಕಾಶ ಉಂಟಾಗುತ್ತದೆ. ಆದರೆ ಸಿಟ್ಟಿನ ಸಂದರ್ಭದಲ್ಲಿ ಹೃದಯ ಮತ್ತು ಮಸ್ತಿಷ್ಕ ಅಂಧಕಾರಮಯವಾಗಿರುತ್ತದೆ. ಅಂಧಕಾರದಿಂದ ಅಂಧಕಾರವೇ

ಹುಟ್ಟುತ್ತದೆ. ಸಿಟ್ಟು ಮತ್ತು ಜಾಣ್ಮೆ ಒಟ್ಟಾಗಿರಲಾರವು. ಸಿಟ್ಟಿನಿಂದ ಪೀಡಿತನಾದವನ ಬುದ್ಧಿ ಮಂದವಾಗಿರುತ್ತದೆ. ಅವನ ತಿಳುವಳಿಕೆ ಮೊಂಡಾಗಿರುತ್ತದೆ. ಅವನಿಗೆ ಯಾವುದೇ ಕ್ಷೇತ್ರದಲ್ಲಿ ಜಯ ನೀಡಲ್ಪಡುವುದಿಲ್ಲ. ಸಿಟ್ಟು ಎಂಬುದು ಒಂದು ಅರ್ಧ ಹುಚ್ಚು ಆಗಿದೆ. ಅದು ಉದ್ರೇಕಗೊಂಡಾಗ ಪೂರ್ಣ ಹುಚ್ಚು ಆಗಬಹುದಾಗಿದೆ. ಯಾರು ಕಠಿಣ ಕೋಪಿಷ್ಠನಾಗುತ್ತಾನೋ ಅವನಿಂದ ವಿವೇಕವನ್ನು ಕಿತ್ತುಕೊಳ್ಳಲಾಗುತ್ತಿದೆ. ಆದುದರಿಂದ ವಿರೋಧಿಯೊಂದಿಗೆ ಸಹ ಕೋಪಭರಿತನಾಗಿ ಮಾತನಾಡಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮನುಷ್ಯನು ಸಂಶಯದಿಂದಲೂ ಸಿಟ್ಟಿನಿಂದಲೂ ಬಹಳ ದೂರ ಸರಿಯಬೇಕು. ಸಂಶಯ ಅಥವಾ ಊಹಾಪೋಹಗಳಿಂದ ದೂರವಿರಲು ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ:

يَا أَيُّهَا الَّذِينَ آمَنُوا اجْتَنِبُوا كَثِيرًا مِنْ الظَّنِّ إِنَّ بَعْضَ الظَّنِّ إِثْمٌ
وَلاَ تَجَسَّسُوا وَلاَ يَغْتَبْ بَعْضُكُمْ بَعْضًا أَيُحِبُّ أَحَدُكُمْ أَنْ يَأْكُلَ
لَحْمَ أَخِيهِ مَيْتًا فَكَرِهْتُمُوهُ وَاتَّقُوا اللَّهَ إِنَّ اللَّهَ تَوَّابٌ رَحِيمٌ

ಓ ವಿಶ್ವಾಸಿಗಳೇ, ಮಿತಿಮೀರಿ ಸಂಶಯ ಪಡುವುದರಿಂದ ನೀವು ದೂರವಿರಿ. ನಿಶ್ಚಯವಾಗಿಯೂ ಕೆಲವು ಸಂಶಯಗಳು ಪಾಪಕರವಾಗಿವೆ. ನೀವು ಪರಸ್ಪರ ಗೂಢಾಚಾರಿಕೆ ಮಾಡಬೇಡಿರಿ. (ಪರಸ್ಪರ) ಬೆನ್ನ ಹಿಂದೆ ದೂಷಿಸಬೇಡಿರಿ. ತನ್ನ ಮೃತ ಸಹೋದರನ ಮಾಂಸವನ್ನು ತಿನ್ನಲು ನಿಮ್ಮಲ್ಲಿ ಯಾರಾದರೂ ಇಷ್ಟಪಡುವನೇ? ಖಂಡಿತವಾಗಿಯೂ ನೀವು ಅದನ್ನು ಅಸಹ್ಯತೆಯಿಂದ ಕಾಣುವಿರಿ. ನೀವು ಅಲ್ಲಾಹನಿಗೆ ಭಯಭಕ್ತಿಯನ್ನು ತೋರಿಸಿರಿ. ದಿಟವಾಗಿಯೂ ಅಲ್ಲಾಹನು ಪಶ್ಚಾತ್ತಾಪ ಸ್ವೀಕರಿಸುವವನೂ ಕಾರುಣ್ಯನಿಧಿಯೂ ಆಗಿದ್ದಾನೆ. (ಪವಿತ್ರ ಖುರ್‌ಆನ್ 49:13)

ಈ ವಚನದಲ್ಲಿ ಹೇಳಿದ ಮೊದಲನೆಯ ವಿಷಯ ಸಂಶಯವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸಂಶಯಪಡುವುದು ಎಂತಹ ರೋಗ ಮತ್ತು ವಿಪತ್ತು ಆಗಿದೆ ಎಂದರೆ ಅದು ಮನುಷ್ಯನನ್ನು ಕುರುಡನನ್ನಾಗಿ ಮಾಡಿ ವಿನಾಶದ ಹೊಂಡಕ್ಕೆ ಬೀಳಿಸುತ್ತದೆ. ಎಲ್ಲ ಕೆಡುಕುಗಳು ಸಂಶಯದಿಂದ ಉದ್ಭವವಾಗುತ್ತವೆ. ಆದುದರಿಂದಲೇ ಅಲ್ಲಾಹನು ಅದನ್ನು ಬಹಳ ಖಂಡಿಸಿದ್ದಾನೆ. ಮನುಷ್ಯರು ಸಂಶಯದದಿಂದ ಮತ್ತು ಊಹಾಪೋಹಗಳಿಂದ ದೂರ ಸರಿಯಬೇಕು. ಯಾರದಾದರೂ ಬಗ್ಗೆ ಕೆಟ್ಟ ಸಂಶಯ ತಲೆದೋರಿದರೆ ಆಗ ಬಹಳ ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡಿರಿ.

ಈ ವಚನದಲ್ಲಿ ನಮ್ಮನ್ನು ತಡೆದಿರುವ ಇನ್ನೊಂದು ವಿಷಯ ಗೂಢಚಾರಿಕೆಯಾಗಿದೆ. ಯಾರದಾದರೂ ತಪ್ಪು ಕಂಡು ಹಿಡಿಯಲು ಪ್ರಯತ್ನಿಸುವುದು, ಯಾವುದಾದರೂ ವಿಷಯಕ್ಕೆ ಸಂಬಂಧಿಸಿ ಗೂಢಚಾರಿಕೆ ನಡೆಸುವುದು, ಯಾರಾದರೂ ಒಂದು ವಿಷಯ ಬಹಿರಂಗಪಡಿಸಲು ಬಯಸುವುದಿಲ್ಲವಾದರೆ ಅದನ್ನು ತಿಳಿಯಲು ಪ್ರಯತ್ನಪಡುವುದು ಇವುಗಳೆಲ್ಲಾ ತಪ್ಪು ಕೆಲಸಗಳಾಗಿವೆ. ಇವುಗಳಿಂದ ಕೆಡುಕುಗಳು ಉದ್ಭವಗೊಳ್ಳುತ್ತವೆ. ಮೂರನೆಯ ಆಜ್ಞೆ ಪರದೂಷಣೆ ಬಗ್ಗೆಯಾಗಿದೆ. ಅದು ಮೃತ ಸಹೋದರನ ಮೃತ ಶರೀರದ ಮಾಂಸವನ್ನು ತಿನ್ನುವುದಕ್ಕೆ ಸಮವಾಗಿದೆ. ಅದನ್ನು ನೀವು ಬಹಳ ಅಸಹ್ಯಪಡುವಿರಿ.

ಒಟ್ಟಿನಲ್ಲಿ, ನಾವು ರಮಝಾನ್‌ನಲ್ಲಿ ಭಯಭಕ್ತಿಯುಳ್ಳವರಾಗಬೇಕು ಎಂದು ಬಯಸುತ್ತೇವೆ. ನಮಗೆ ಅಲ್ಲಾಹನ ಸಾಮೀಪ್ಯ ದೊರಕಬೇಕು ನಮ್ಮ ಪ್ರಾರ್ಥನೆಗಳು ಅಂಗೀಕರಿಸಲ್ಪಡಬೇಕು ಎಂದು ಬಯಸುತ್ತೇವೆ. ಆದುದರಿಂದ ನಾವು ಮೇಲೆ ವಿವರಿಸಿದ ಕೆಡುಕುಗಳಿಂದ ರಕ್ಷಿಸಿಕೊಳ್ಳಲು ಮತ್ತು ಅಲ್ಲಾಹನ ಆಜ್ಞೆಗಳನ್ನು ಪಾಲಿಸಲು ಬಹಳ ಪ್ರಯತ್ನಿಸಬೇಕು. ಅಲ್ಲಾಹನು ನಮಗೆ ಆ ಭಾಗ್ಯವನ್ನು ನೀಡಿ ಅನುಗ್ರಹಿಸಲಿ. ನಾವು ಅಲ್ಲಾಹನ ಎಲ್ಲ ಆಜ್ಞೆಗಳನ್ನು ಪಾಲಿಸುತ್ತಾ ಅವನ ಸಾಮೀಪ್ಯ ಗಳಿಸುವವರಾಗೋಣ. ರಮಝಾನ್‌ನ ನಂತರ ಸಹ ನಾವು ನಮ್ಮ ಒಳಿತುಗಳಲ್ಲಿ ಸ್ಥಿರವಾಗಿರುವಂತೆ ಅಲ್ಲಾಹನು ಮಾಡಲಿ. ನಾವು ಅಲ್ಲಾಹನ ವಾಸ್ತವಿಕ ಆರಾಧಕರಾಗುವ ಭಾಗ್ಯ ಲಭಿಸಲಿ. ಅವನನ್ನು ಪರಿಪೂರ್ಣವಾಗಿ ಅನುಸರಿಸುವವರಾಗುವ ಭಾಗ್ಯ ನಮಗೆ ಲಭಿಸುವಂತಾಗಲಿ – ಆಮೀನ್.

(ಖುತ್‌ಬದ ಕೊನೆಗೆ ಹುಝೂರ್, ಮುಕರ್‍ರಮ್ ಚೌಧರಿ ಖಲೀಖ್ ಅಹ್ಮದ್ ಬಿನ್ ಮುಕರ್‍ರಮ್ ಚೌಧರಿ ಬಶೀರ್ ಅಹ್ಮದ್ ಸಾಹಿಬ್‌ರವರು 20–6–2016ರಂದು ಶತ್ರುಗಳಿಂದ ಶಹೀದರರನ್ನಾಗಿ ಮಾಡಲ್ಪಟ್ಟ ಬಗ್ಗೆ ಪ್ರಸ್ತಾಪಿಸಿ ಅವರ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವ ಬಗ್ಗೆ ಪ್ರಕಟಿಸಿದರು.)

*****


***Friday Sermon delivered by Hadrath Khaleefatul Masih Al Khamis**(atba)*

*at Masjid Baithul Futhuh, London on 24-06-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email**: khutuba.kannada@gmail.com*



**You can find all the Sermons archived at**: www.alislam.org/friday-sermon